**ಕರ್ನಾಟಕ ಸರ್ಕಾರ**

**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ದೇವನಹಳ್ಳಿ**

**ಎಸ್.ಸಿ. ನಂ. 15062/2022**

| | | |
|---|---|---|
| ಹೆಸರು | : | ಅರುಣ್ ಕುಮಾರ್ |
| ತಂದೆ ಹೆಸರು | : | ಕೆಂಪೇಗೌಡ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕೋಳಿಪುರ |

**PW - 4, CW-4**

(ಇಂದು ದಿನಾಂಕ 28.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆ : ಅಭಿಯೋಜನೆ ಪರ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:**

ಚಾಸಾ.1 ರಿಂದ 3 ಗೊತ್ತು. ದಿನಾಂಕ 22.09.2020 ರಂದು ಬೆಳಗ್ಗೆ 10.00 ರಿಂದ 11.00 ಗಂಟೆ ಸಮಯದಲ್ಲಿ ನಿ.ಪಿ.3 ಕ್ಕೆ ಚಾಸಾ.1 ರವರ ಜಮೀನಿನ ಹತ್ತಿರ ಸಹಿ ಮಾಡಿರುತ್ತೇನೆ. ಈಗ ನೋಡುತ್ತಿರುವ ನಿ.ಪಿ.3 ರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ.3 (ಸಿ) ಎಂದು ಗುರುತಿಸಲಾಯಿತು. ರಾಡು ವಿಚಾರವಾಗಿ ಸಹಿ ಮಾಡಿರುತ್ತೇನೆ. ಈಗ ನೋಡುತ್ತಿರುವ ಮು.ಮಾ.1 ರ ವಿಚಾರವಾಗಿ ಸಹಿ ಮಾಡಿರುತ್ತೇನೆ. ಮು.ಮಾ.1 ರ ಮೇಲೆ ಅಂಟಿಸಿರುವ ಚೀಟಿಗೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರು ಪರಿಶೀಲನೆ ಮಾಡಿ ಮು.ಮಾ.1 ಕ್ಕೆ ಸಹಿ ಪಡೆದುಕೊಂಡಿರುತ್ತಾರೆ. ನಾಗೇಶ್ ರವರ ಮೇಲೆ ಗಲಾಟೆಯಾದ ವಿಷಯಕ್ಕಾಗಿ ಪೊಲೀಸರು ಕರೆಸಿದ್ದರು.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಡಿಎನ್‌ಜೆ ವಕೀಲರಿಂದ:**

ಪೊಲೀಸರು ಪಂಚನಾಮೆಗೆ ಪಂಚರಾಗಿ ಬರಲು ನೋಟಿಸ್ ಕೊಟ್ಟಿರಲಿಲ್ಲ. ಫೋನ್ ಮುಖಾಂತರ ಹೇಳಿದ್ದರು. ಪೊಲೀಸರ ಹೆಸರು ಗೊತ್ತಿಲ್ಲ. ನಾನು ಪೊಲೀಸರಿಗೆ ನನ್ನ ಮೊಬೈಲ್ ನಂಬರ್ ನೀಡಿದ್ದರೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಾನು ಠಾಣೆಗೆ 2-3 ಬಾರಿ ಹೋಗಿದ್ದೆ ಆ ಕಾರಣಕ್ಕಾಗಿ ನನ್ನ ನಂಬರ್ ಅವರ ಹತ್ತಿರ ಇದ್ದುದ್ದರಿಂದ ನನ್ನನ್ನು ಫೋನ್ ಮಾಡಿ ಕರೆದರು. ಯಾವುದೋ ಗಲಾಟೆ ವಿಚಾರಕ್ಕೆ

ಠಾಣೆಗೆ ಹೋಗಿದ್ದೆ. ಮಹೇಶ್ ಎನ್ನುವವರು ಗಲಾಟೆಯಾಗಿದೆ ಹೋಗೋಣ ಬಾ ಬಂದು ಕರೆದಿದ್ದರಿಂದ ಹೋಗಿದ್ದೆ. ದೂರುದಾರರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಮಹಜರನ್ನು ಯಾವ ಜಮೀನಿನ ಹತ್ತಿರ ಮಾಡಿರುತ್ತಾರೆ ಎಂದು ಗೊತ್ತಿಲ್ಲ, ಆದರೆ ದೂರುದಾರರು ಜಮೀನಿನ ಹತ್ತಿರ ಮಾಡಿರುತ್ತಾರೆ. ನಿ.ಪಿ.3 ರಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿರುತ್ತಾರೆ. ಜಗಳ ಆ ಸ್ಥಳದಲ್ಲಿ ಯಾರ ಯಾರ ಮಧ್ಯೆ ಆಗಿರುತ್ತದೆ ಎಂದು ಗೊತ್ತಿಲ್ಲ. ರಾಡ್ ವಿಷಯವಾಗಿ ನನ್ನನ್ನು ಪೊಲೀಸರು ಕರೆಸಿದ್ದರು. ಮು.ಮಾ.1 ರಂತಹ ರಾಡುಗಳು ಮನೆ ಕಟ್ಟಡದ ಕೆಲಸ ಮಾಡುವ ಸ್ಥಳದಲ್ಲಿ ಸಿಗುತ್ತದೆ ಅನ್ನುವುದು ನಿಜ. ನಿ.ಪಿ.3 ನ್ನು ಪೊಲೀಸರು ಬರೆದಿರುತ್ತಾರೆ. ನಾನು ಚಾಸಾ.1 ಮತ್ತು ಪೊಲೀಸರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಮು.ಮಾ.1 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತಾರೆ ಅನ್ನುವುದು ಸರಿಯಲ್ಲ.

**ಮರುವಿಚಾರಣೆಃ** ಇಲ್ಲ

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿ, ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.

V AD& SJ, B,luru (R)
Devanahalli